ಕರ್ನಾಟಕ ಸರ್ಕಾರ

ನಂ. : ನಅಇ 142 ಎಂಎಸ್ಎಕ್ಸ್ 95

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.
ದಿನಾಂಕ : 30.9.1996

ಇಂದ
ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ,
ಕರ್ನಾಟಕ ಸರ್ಕಾರ,
ಬೆಂಗಳೂರು.

ಇವರಿಗೆ
ಅಧ್ಯಕ್ಷರು
ಬೆಂಗಳೂರು ಅಂತರಾಷ್ಟ್ರೀಯ ವಿಮಾನ
ನಿಲ್ದಾಣ ಯೋಜನಾ ಪ್ರದೇಶ ಪ್ರಾಧಿಕಾರ,
ಬೆಂಗಳೂರು.

ಮಾನ್ಯರೆ,

**ವಿಷಯ : ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರದೇಶವು ಅಭಿವೃದ್ಧಿ ಶುಲ್ಕಗಳನ್ನು ಸಂಗ್ರಹಿಸುವ ಬಗ್ಗೆ**

**ಉಲ್ಲೇಖ : ಅರೆ ಸರ್ಕಾರಿ ಪತ್ರ ಸಂಖ್ಯೆ : ಬಿಐಎಪಿ : ಟಿಪಿ : ಎಲೆವ್ಹೆ ಫೀಸ್ : 001 : 97-98 ದಿನಾಂಕ 8.8.1997**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ನಕ್ಷೆ, ಉಪವಿಭಾಗ ಅಥವಾ ಭೂ ಬದಲಾವಣೆಗೆಗೆ ಅನುಮತಿ ನೀಡುವಾಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವ ರೀತಿ ಶುಲ್ಕಗಳನ್ನು ವಿಧಿಸುತ್ತದೆಯೋ ಅದೇ ರೀತಿ ಈ ಪ್ರಾಧಿಕಾರವು ಸಹ ಅಭಿವೃದ್ಧಿ ಶುಲ್ಕಗಳನ್ನು ಸಂಗ್ರಹಿಸಲು ದಿನಾಂಕ : 31.05.1996 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ನಿರ್ಣಯ ತೆಗೆದುಕೊಂಡು ದಿನಾಂಕ 5.08.1996 ರಂದು ಅಧಿಕೃತ ಜ್ಞಾಪನವನ್ನು ಹೊರಡಿಸಿದ್ದು, ಸದರಿ ಅಧಿಕೃತ ಜ್ಞಾಪನಕ್ಕೆ ಸರ್ಕಾರದ ಅನುಮೋದನೆಯನ್ನು ಕೋರಿರುವುದು ಸರಿಯಷ್ಟೇ. ಉಲ್ಲೇಖಿತ ಪತ್ರದ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಪ್ರಾಧಿಕಾರವು ದಿನಾಂಕ : 5.08.1996 ರಂದು ಹೊರಡಿಸಿರುವ ಅಧಿಕೃತ ಜ್ಞಾಪನಕ್ಕೆ ಸರ್ಕಾರದ ಅನುಮೋದನೆಯನ್ನು ನೀಡಿದೆಯೆಂದು ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

sd/-
(ಸಿದ್ಧರಾಮಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ